ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ________

ಪತ್ರಿಕೆಯ ಹೆಸರು : NAME OF THE NEWS PAPER: ________ ದಿನಾಂಕ : DATE : 9/7/20

## ಕರ್ತವ್ಯ ಲೋಪದಿಂದ ಗರ್ಭಿಣಿ ಸಾವು ಪ್ರಕರಣ

# ವೈದ್ಯೆಯ ನಿರ್ಲಕ್ಷ್ಯಕ್ಕೆ ಜೈಲು ಶಿಕ್ಷೆ

**ಹುಬ್ಬಳ್ಳಿ:** ವೈದ್ಯಕೀಯ ನಿರ್ಲಕ್ಷ್ಯ ಹಾಗೂ ನಕಲಿ ದಾಖಲೆ ಸೃಷ್ಟಿ, ನಕಲಿ ಸಹಿ ಮಾಡಿದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಸ್ಥಳೀಯ ದೇಶಪಾಂಡೆ ನಗರದ ಸ್ತ್ರೀರೋಗ ಹಾಗೂ ಪ್ರಸೂತಿ ತಜ್ಞೆ ಡಾ. ಸಬಿತಾ ಕಲ್ಯಾಣಪುರಕರ ಅವರಿಗೆ ಹುಬ್ಬಳ್ಳಿ 2ನೇ ಜೆಎಂಎಫ್‌ಸಿ ನ್ಯಾಯಾಲಯ ಒಂದೂವರೆ ವರ್ಷ ಜೈಲು ಶಿಕ್ಷೆ ಹಾಗೂ 30 ಸಾವಿರ ರೂ. ದಂಡ ವಿಧಿಸಿದೆ.

ಸುದೀರ್ಘ 12 ವರ್ಷಗಳವರೆಗೆ ನಡೆದ ವಿಚಾರಣೆಯಲ್ಲಿ ವೈದ್ಯರು ನಿರ್ಲಕ್ಷ್ಯ ತೋರಿರುವುದು, ನಕಲಿ ದಾಖಲೆಗಳನ್ನು ಸೃಷ್ಟಿ ಮಾಡಿರುವುದನ್ನು ಫಿರ್ಯಾದುದಾರರ ಪರ ವಕೀಲ ಸುನೀಲ್ ಕುಲಕರ್ಣಿ ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಟ್ಟರು. ಇದನ್ನು ಅಂಗೀಕರಿಸಿದ ಕೋರ್ಟ್ ಜೈಲು ಶಿಕ್ಷೆ ವಿಧಿಸಿತು.

ಶ್ರೀಪಾದ ಕುಲಕರ್ಣಿ ಎಂಬುವವರು ತಮ್ಮ ಪತ್ನಿ ಲಕ್ಷ್ಮೀಯವರನ್ನು 4-1-2008 ರಂದು ಡಾ. ಕಲ್ಯಾಣಪುರಕರ ನರ್ಸಿಂಗ್ ಹೋಮ್‌ಗೆ ದಾಖಲಿಸಿದ್ದರು. ಅಂದೇ ಹೆಣ್ಣು ಮಗುವಿಗೆ ಜನ್ಮ ನೀಡಿದ ತಾಯಿಗೆ ವೈದ್ಯರು ಸಕಾಲಕ್ಕೆ ಚಿಕಿತ್ಸೆ ನೀಡಲಿಲ್ಲ. ಹೀಗಾಗಿ ತಾಯಿ ತೀವ್ರ ರಕ್ತಸ್ರಾವದಿಂದ ಮೃತಪಟ್ಟಿದ್ದರು. ಇದಕ್ಕೆ ವೈದ್ಯರ ನಿರ್ಲಕ್ಷ್ಯವೇ ಕಾರಣ ಎಂದು ಆರೋಪಿಸಿ, ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸುವಂತೆ ಶ್ರೀಪಾದ ಕುಲಕರ್ಣಿ ಕೋರ್ಟ್ ಮೊರೆ ಹೋಗಿದ್ದರು. ರೋಗಿಗೆ ಎಲ್ಲ ಚಿಕಿತ್ಸೆ ಕೊಟ್ಟಿದ್ದೇನೆ ಎಂದು ತೋರಿಸಲು ವೈದ್ಯರು ಸುಳ್ಳು ದಾಖಲೆ ಸೃಷ್ಟಿಸಿದ್ದಲ್ಲದೇ ಅದರಲ್ಲಿ ಫಿರ್ಯಾದುದಾರರ ಸಹಿಯನ್ನೂ ತಾವೇ ಮಾಡಿದ್ದರು.

**ಅವಿರತ ಹೋರಾಟ, 18 ಲಕ್ಷ ದಂಡಕ್ಕೆ ಆದೇಶ:** ವೈದ್ಯೆಯ ನಿರ್ಲಕ್ಷ್ಯದಿಂದ ತಮ್ಮ ಪತ್ನಿಯನ್ನು ಕಳೆದುಕೊಂಡಿದ್ದ ಕುಲಕರ್ಣಿ ಅವರು ಡಾ. ಸಬಿತಾ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದಲ್ಲದೆ ಗ್ರಾಹಕರ ನ್ಯಾಯಾಲಯದಲ್ಲೂ ಅವಿರತ ಹೋರಾಟ ನಡೆಸಿದ್ದರು. ಜಿಲ್ಲಾ ಮಟ್ಟದ ಗ್ರಾಹಕ ವೇದಿಕೆಗೂ ದೂರು ನೀಡಿದ್ದರು.

ವಿಚಾರಣೆ ನಡೆಸಿದ ವೇದಿಕೆ 3 ಲಕ್ಷ ರೂ. ಪರಿಹಾರ ನೀಡಲು ವೈದ್ಯೆಗೆ ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ಡಾ. ಸಬಿತಾ ರಾಜ್ಯ ವೇದಿಕೆಗೆ ಅರ್ಜಿ ಸಲ್ಲಿಸಿದ್ದರು. ಅಲ್ಲಿ ಅದಕ್ಕೆ ಮಾನ್ಯತೆ ಸಿಗದೇ ಇದ್ದಾಗ ರಾಷ್ಟ್ರೀಯ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗದ ಕದ ತಟ್ಟಿದ್ದರು. ರಾಷ್ಟ್ರೀಯ ಆಯೋಗ ಜಿಲ್ಲಾ ಗ್ರಾಹಕರ ವೇದಿಕೆ ನೀಡಿದ್ದ ತೀರ್ಪನ್ನು ಎತ್ತಿ ಹಿಡಿದಿದ್ದಲ್ಲದೆ ಪರಿಹಾರದ ಮೊತ್ತವನ್ನು 18 ಲಕ್ಷ ರೂ. ಗೆ ಏರಿಸಿ ಆರು ತಿಂಗಳಲ್ಲಿ ಪಾವತಿ ಮಾಡಲು ಆದೇಶಿಸಿತ್ತು.